ಸಂಯುಕ್ತ ಕರ್ನಾಟಕ

# ಅಂತರ ವಿಶ್ವವಿದ್ಯಾಲಯ ಈಜು ಸ್ಪರ್ಧೆ: ನೀಲ್ ಅತಿ ವೇಗದ ಈಜುಗಾರ

**ಬೆಂಗಳೂರು,ಅ.29 :** ಗುಜರಾತ್ ವಿಶ್ವ ವಿಧ್ಯಾಲಯದ ನೀಲ್ ಕಾಂಟ್ರಾಕ್ಟರ್, ಜೈನ್ ಗ್ಲೋಬಲ್ ಕ್ಯಾಂಪಸ್‌ನಲ್ಲಿ ನಡೆಯುತ್ತಿರುವ ಅಖಿಲ ಭಾರತ ಅಂತರ ವಿಶ್ವ ವಿಧ್ಯಾಲಯ ಈಜು ಸ್ಪರ್ಧೆಯ ನಾಲ್ಕನೇ ದಿನ ಕೂಟದ ಅತ್ಯಂತ ವೇಗದ ಈಜುಗಾರ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ.

ಪುರುಷರ ವಿಭಾಗದ 50 ಮೀ ಫ್ರೀಸ್ಟೈಲ್‌ನಲ್ಲಿ 24.51 ಸೆಗಳಲ್ಲಿ ಗುರಿ ಮುಟ್ಟಿದ ನೀಲ್ ಕಾಂಟ್ರಾಕ್ಟರ್,ನೂತನ ದಾಖಲೆಯೊಂದಿಗೆ ಬಂಗಾರದ ಪದಕ ಬಾಚಿಕೊಂಡು ಹಿರಿಮೆ ಮೆರದರು. 2013 ರಲ್ಲಿ ಪಂಜಾಬ್ ವಿಶ್ವ ವಿದ್ಯಾಲಯ ಸ್ಥಾಪಿಸಿದ್ದ ದಾಖಲೆಯನ್ನು ನೀಲ್ ಮುರಿದು ನೂತನ ದಾಖಲೆಯನ್ನು ತಮ್ಮ ಹೆಸರಿಗೆ ಬರೆಯಿಸಿಕೊಂಡರು.



ಜೈನ್ ವಿಶ್ವ ವಿದ್ಯಾಲಯವನ್ನು ಪ್ರತಿನಿಧಿಸುತ್ತಿರುವ ಮೀನಾಕ್ಷಿ, ಮಹಿಳೆಯರ 100 ಮೀ ಬ್ಯಾಕ್ ಸ್ಟ್ರೋಕ್‌ನಲ್ಲಿ ನೂತನ ದಾಖಲೆ ನಿರ್ಮಿಸಿದರು. ಪ್ರಸಕ್ತ ಈಜು ಸ್ಪರ್ಧೆಯಲ್ಲಿ ಇದು ಆಕೆ ನಿರ್ಮಿಸಿದ ಐದನೇ ನೂತನ ದಾಖಲೆ. ಇದರೊಂದಿಗೆ ಆಕೆ ಶಿಖಾ ಟಂಡನ್ ಅವರ ದಾಖಲೆಯನ್ನು ಮುರಿದು ನೂತನ ಧಾಖಲೆ ನಿರ್ಮಿಸಿದರು.

ದೆಹಲಿ ವಿಶ್ವವಿದ್ಯಾಲಯದ ಮಹಿಳಾ ತಂಡ 4*100 ಮೀಟರ್ ರಿಲೇಯಲ್ಲಿ 4ನಿ. 25.02 ಸೆಗಳಲ್ಲಿ ಗುರಿ ಮುಟ್ಟಿ ನೂತನ ದಾಖಲೆಯೊಂದಿಗೆ ಚಿನ್ನದ ಪದಕ ಪಡೆಯಿತು.

ಪುರುಷರ ವಿಭಾಗದ 200 ಮೀಟರ್ ಮಿಡ್ಲೆ ಸ್ಪರ್ಧೆಯಲ್ಲಿ ಬೆಳಗಾವಿಯ ವಿಶ್ವೇಶ್ವರಯ್ಯ ವಿಶ್ವವಿಧ್ಯಾಲಯದ ಅರವಿಂದ್ ಎಮ್, 2 ನಿ. 11.88 ಸೆಗಳಲ್ಲಿ ಗುರಿ ಮುಟ್ಟಿ ಬಂಗಾರದ ಸಾಧನೆ ಮಾಡಿದರು. ಮಹಿಳಾ ವಿಭಾಗದಲ್ಲಿ ಜೈನಲ್ ವಿಶ್ವವಿಧ್ಯಾಲಯದ ಮೀನಾಕ್ಷಿ, 2 ನಿ. 31.55 ಸೆ ಗಳಲ್ಲಿ ಗುರಿ ತಲುಪಿ ಬಂಗರದ ಪದಕ ಪಡೆದರು.

ಪುರುಷರ ವಿಭಾಗದ 100 ಮೀಟರ್ ಬ್ಯಾಕ್ ಸ್ಟ್ರೋಕ್ ಸ್ಪರ್ಧೆಯಲ್ಲಿ ಬೆಳಗಾವಿಯ ವಿಶ್ವೇಶ್ವರಯ್ಯ ವಿಶ್ವವಿಧ್ಯಾಲಯದ ಅರವಿಂದ್ ಎಮ್, 59.75 ಸೆ ಗಳಲ್ಲಿ ಗುರಿ ಮುಟ್ಟಿ ಚಿನ್ನದ ಸಾಧನೆ ಮಾಡಿದರು.

ಪಂಜಾಬ್ ವಿಶ್ವವಿದ್ಯಾಲಯದ ಪುರುಷರ ತಂಡ 4*100 ಮೀಟರ್ ರಿಲೇಯಲ್ಲಿ 3ನಿ.47.10ಸೆಗಳಲ್ಲಿ ಗುರಿ ಮುಟ್ಟಿ, ತಾವೇ ಹಿಂದೆ ನಿರ್ಮಿಸಿದ್ದ ದಾಖಲೆಯನ್ನು ಮುರಿದು ನೂತನ ದಾಖಲೆಯೊಂದಿಗೆ ಬಂಗಾರದ ಪದಕ ಪಡೆಯಿತು.

